## 2 ನೇ ಅಪರ ಜಿಲ್ಲಾ ಮತ್ತು ಸತ್ರ, ನ್ಯಾಯಾಧೀಶರವರ ನ್ಯಾಯಾಲಯ ಮೈಸೂರು

| ಎಸ್ ಸಿ : | 270/**19** |
|---|---|

| | | |
|---|---|---|
| ಸಾಕ್ಷಿದಾರರ ಹೆಸರು | **ಮಹದೇವಸ್ವಾಮಿ ಎಮ್** | |
| ತಂದೆಯ ಹೆಸರು | **ಮರಿಸಿದ್ದಶೆಟ್ಟಿ** | ಸಾಕ್ಷಿಗೆ ದಿಃ **19.12.2022** ರಂದು ಪ್ರಮಾಣ ವಚನ ಭೋಧಿಸಲಾಯಿತು. |
| ವಯಸ್ಸು | **43 ವರ್ಷ** | |
| ಉದ್ಯೋಗ | **ಪೊಲೀಸ್ ಇನ್ಸಪೇಕ್ಟರ್ ಚೆಸ್ಕಾಂ ಮಡಿಕೇರಿ** | ಪಿ.ಡಬ್ಲ್ಯೂ **-17** |
| ವಾಸ ಸ್ಥಳ | **ಮಡಿಕೇರಿ** | ಸಿ.ಡಬ್ಲ್ಯೂ **-25** |

### ಮುಖ್ಯ ವಿಚಾರಣೆ ಮಾನ್ಯ ಸರ್ಕಾರಿ ಅಭಿಯೋಜಕರಿಂದಃ-

ನಾನು ಅಕ್ಟೋಬರ್ 2018 ರಿಂದ ಅಕ್ಟೋಬರ್ 2019 ರ ವರೆಗೆ ಪೊಲೀಸ್ ಇನ್ಸಪೇಕ್ಟರ್ ಆಗಿ ನಜರಬಾದ್ ಪೊಲೀಸ್ ಠಾಣೆಯಲ್ಲಿ ಕರ್ತವ್ಯ ನಿರ್ವಹಿಸಿರುತ್ತೇನೆ. ದಿಃ 25.07.2019 ರಂದು ಕೃತ್ಯ ನಡೆದ ಸ್ಥಳಕ್ಕೆ ಭೇಟಿಕೊಟ್ಟು ಕೃತ್ಯ ನಡೆದ ಸ್ಥಳದಲ್ಲಿ ಮೊಹಮ್ಮದ ಇಸ್ಮಾಲ್ ರವರು ಕೊಟ್ಟ ಫಿರ್ಯಾದಿಯನ್ನು ಸ್ವೀಕರಿಸಿ ಅದರ ಆಧಾರದ ಮೇಲೆ ಪ್ರಕರಣವನ್ನು ದಾಖಲು ಮಾಡಿಕೊಳ್ಳಲು ಠಾಣೆಗೆ ಕಳುಹಿಸಿಕೊಟ್ಟಿರುತ್ತೇನೆ. ಸಾಕ್ಷಿಯು ಫಿರ್ಯಾದಿ ಮೇಲೆ ಇರುವ ತನ್ನ ಸಹಿಯನ್ನು ಗುರುತಿಸಿದ್ದು, ಫಿರ್ಯಾದಿ ಈಗಾಗಲೇ ನಿಪಿ-1 ಎಂದು ಗುರುತಿಸಲಾಗಿದ್ದು, ಅದರ ಮೇಲಿರುವ ಸಾಕ್ಷಿ ಸಹಿಯನ್ನು ನಿಪಿ-1(ಸಿ) ಎಂದು ಗುರುತಿಸಲಾಯಿತು. ಪ್ರಕರಣ ದಾಖಲು ಮಾಡಿಕೊಂಡು ಎ.ಎಸ್.ಐ ರವರು ನನಗೆ ಕಡತವನ್ನು ಮುಂದಿನ ತನಿಖೆಗಾಗಿ ಕಳುಹಿಸಿಕೊಟ್ಟಿರುತ್ತಾರೆ. ನಂತರ ಸ್ಥಳದಲ್ಲಿ ಪಂಚಾಯ್ತಿದಾರರಾದ ಚಾಸ್-2 ರಿಂದ ಚಾಸ್-4 ರವರಿಗೆ ಶವಪಂಚನಾಮೆಗೆ ಹಾಜರಿರಲು ನೋಟಿಸ್ ಕೊಟ್ಟಿರುತ್ತೇನೆ. ಶವಪಂಚನಾಮೆಯನ್ನು ದಿಃ 25.07.2019 ರಂದು ಸಾಯಂಕಾಲ 3.15 ಗಂಟೆಯಿಂದ 5.15 ಗಂಟೆಯ ವರೆಗೆ ರೇಷ್ಮಾ ಬಾನು ಇವರ ಶವಪಂಚನಾಮೆಯನ್ನು ಪಂಚರ ಸಮಕ್ಷಮಾ ಮಾಡಿರುತ್ತೇನೆ. ಶವದ ಕುತ್ತಿಗೆ

ಕೊಯ್ದು (ಚುಚ್ಚಿದ)ಗಾಯ ಇತ್ತು, ಕುತ್ತಿಗೆಯ ಹಿಂಭಾಗದಲ್ಲಿ ಕೊಯ್ದು ಹಾಗೂ ಚುಚ್ಚಿದ 2 ಇಂಚು ಅಗಲದ ಗಾಯ ಇತ್ತು, ಶವದ ಎಡ ಪಕ್ಕೆಯ ಮೇಲೆ 2 ಇಂಚು ಅಳತೆಯ ಕೊಯ್ದು (ಚುಚ್ಚಿದ) ಗಾಯ ಇತ್ತು, ಶವಪಂಚನಾಮೆಯನ್ನು ಈಗಾಗಲೇ ನಿಪಿ -3 ಎಂದು ಗುರುತಿಸಲಾಗಿದ್ದು, ಸಾಕ್ಷಿ ಸಹಿಯನ್ನು ನಿಪಿ-3(ಸಿ) ಎಂದು ಗುರುತಿಸಲಾಯಿತು. ಶವಪಂಚನಾಮೆಯ ಕಾಲಕ್ಕೆ ರಕ್ತದ Swab ನ್ನು ವಶಪಡಿಸಿಕೊಂಡಿರುತ್ತೇನೆ. ಅದು ಈಗಾಗಲೇ ಎಂ.ಓ-1 ಎಂದು ಗುರುತಿಸಲಾಗಿದೆ. ನಂತರ ರಕ್ತ ಸಂಬಂಧಿಕರಾದ ಮೃತಳ ತಾಯಿ ಚಾಸ್-5 ರಿಂದ ಚಾಸ್-7 ಇವರ ಹೇಳಿಕೆಗಳನ್ನು ಪಡೆದುಕೊಂಡಿರುತ್ತೇನೆ. ಫ್ರಾಸ್ -8 ಫಯಾಜ್ ನನ್ನ ಮುಂದೆ ನಿಪಿ-8 ರಂತೆ ಹೇಳಿಕೆ ಕೊಟ್ಟಿರುತ್ತಾರೆ. ಸಾಕ್ಷಿಗಳಿಗೆ ಕೊಟ್ಟ ನೋಟಿಸ್ ನ ಕಾಪಿಯನ್ನು ನಿಪಿ-4 ಎಂದು ಈಗಾಗಲೇ ಗುರುತಿಸಲಾಗಿದೆ. ಶವದ ಪಂಚನಾಮೆಯ ಕಾಲಕ್ಕೆ ಶವದ ಪೋಟೋಗಳನ್ನು ತೆಗೆಯಲಾಗಿದ್ದು ಅವು ಈಗಾಗಲೇ ನಿಪಿ-5 ರಿಂದ ನಿಪಿ-7 ಎಂದು ಗುರುತಿಸಲಾಗಿದೆ. ಶವವನ್ನು ಮರಣೋತ್ತರ ಪರೀಕ್ಷೆಗಾಗಿ ಡಬ್ಲ್ಯೂ.ಪಿ.ಸಿ ಸವಿತಾ ಇವರ ಮೂಲಕ ಕೆ.ಆರ್.ಆಸ್ಪತ್ರೆಗೆ ಕಳುಹಿಸಿಕೊಟ್ಟಿರುತ್ತೇನೆ.

ನಂತರ ಅದೇ ದಿನ ಸಾಕ್ಷಿ ಒಂದು ಇವರು ತೋರಿಸಿದ ಸ್ಥಳದ ಮಹಜರನ್ನು ಪಂಚರಾದ ಫ್ರಾಸ್-2 ಮತ್ತು ಫ್ರಾಸ್-3 ಇವರ ಸಮಕ್ಷಮಾ ಸಂಜೆ 5.20 ರಿಂದ 6.00 ಗಂಟೆಯ ವರೆಗೆ ಸ್ಥಳದ ಪಂಚನಾಮೆ ಮಾಡಿರುತ್ತೇವೆ. ಸ್ಥಳ ಪಂಚನಾಯ ಈಗಾಗಲೇ ನಿಪಿ-2 ಎಂದು ಗುರುತಿಸಲಾಗಿದೆ, ಸಾಕ್ಷಿಯ ಸಹಿಯನ್ನು ನಿಪಿ-2(ಡಿ) ಎಂದು ಗುರುತಿಸಲಾಯಿತು. ಜಪ್ತಿಯಾದ ರಕ್ತದ Swab ನ್ನು ಪಿ.ಎಫ್ ನಲ್ಲಿ ಅಳವಡಿಸಿ ನ್ಯಾಯಾಲಯಕ್ಕೆ ವರದಿ ಕೊಟ್ಟಿರುತ್ತೇನೆ. ಸದರಿ ರಕ್ತದ Swab ನ್ನು ಈಗಾಗಲೇ ಎಂ.ಓ-1 ಎಂದು ಗುರುತಿಸಲಾಗಿದೆ. ಸಾಕ್ಷಿದಾರರಾದ ಚಾಸ್-10 ರಿಂದ ಚಾಸ್ 14 ಇವರ ಹೇಳಿಕೆಗಳನ್ನು ಪಡೆದುಕೊಂಡಿರುತ್ತೇನೆ. ಆರೋಪಿಯನ್ನು ಹುಡುಕಿ ತರಲು ಸಿಬ್ಬಂದಿಯನ್ನು ನೇಮಕ ಮಾಡಿರುತ್ತೇನೆ.

ದಿಃ 26.07.2019 ರಂದು ಮರಣೋತ್ತರ ಪರೀಕ್ಷೆ ಮಾಡುವ ಸಂಬಂಧ ವೈದ್ಯಾಧಿಕಾರಿಗಳಿಗೆ ವರದಿಯನ್ನು ಕೊಟ್ಟಿರುತ್ತೇನೆ. ಮರಣೋತ್ತರ ಪರೀಕ್ಷೆ ಆದ ನಂತರ ಶವವನ್ನು ಮೃತನ ಸಂಬಂಧಿಗಳಿಗೆ ಮುಂದಿನ ಶವಸಂಸ್ಕಾರಕ್ಕಾಗಿ ಶವವನ್ನು ಕೊಟ್ಟಿರುತ್ತೇನೆ. ಫ್ರಾಸ್-11 ಮತ್ತು ಫ್ರಾಸ್ -12 ರವರು ನನ್ನ ಮುಂದೆ ನಿಪಿ-12 ಮತ್ತು ನಿಪಿ-13 ರಂತೆ ಹೇಳಿಕೆ ಕೊಟ್ಟಿರುತ್ತಾರೆ ನಂತರ ನಾನು ಮರು ಹೇಳಿಕೆಯನ್ನು ಪಡೆದುಕೊಂಡಿರುತ್ತೇನೆ, ಪ್ರಕರಣಕ್ಕೆ ಸಂಬಂಧಪಟ್ಟಂತೆ ಸಾಕ್ಷಿದಾರರಾದ ಚಾಸ್-15 ಮತ್ತು ಚಾಸ್-16 ಶಮ್ಮೀವುಲ್ಲಾ ಮತ್ತು ನೌಶಾದ್ ಪಾಷಾ, ರವರ ಹೇಳಿಕೆಯನ್ನು ಪಡೆದುಕೊಂಡಿರುತ್ತೇನೆ.

ದಿಃ 01.08.2019 ರಂದು ಸಿಬ್ಬಂದಿಯವರಾದ ಪುಟ್ಟಸ್ವಾಮಿ ಮತ್ತು ನಿರಂಜನ ಇವರು ಆರೋಪಿತನನ್ನು ರಿಂಗ್ ರಸ್ತೆಯಲ್ಲಿ ವಶಕ್ಕೆ ಪಡೆದು ಆರೋಪಿತನನ್ನು ನನ್ನ ಮುಂದೆ ಹಾಜರುಪಡಿಸಿ ವರದಿ ನೀಡಿರುತ್ತಾರೆ. ಸದರಿ ವರದಿ ಈಗಾಗಲೇ ನಿಪಿ-15 ಎಂದು ಗುರುತಿಸಲಾಗಿದೆ. ಆರೋಪಿತನನ್ನು ವಿಚಾರಣೆ ಮಾಡಿ ಸ್ವ ಇಚ್ಚೆ ಹೇಳಿಕೆಯನ್ನು ಪಡೆದುಕೊಂಡಿರುತ್ತೇನೆ. ಆರೋಪಿತನು ತನ್ನ ಹೇಳಿಕೆಯಲ್ಲಿ ತನ್ನ ಹೆಂಡತಿಯನ್ನು ಕೊಲೆ ಮಾಡಿದ ಬಗ್ಗೆ ಒಪ್ಪಿಕೊಂಡು, ಕೊಲೆ ಮಾಡಲು ಉಪಯೋಗಿಸಿದ ಚಾಕುವನ್ನು ಸರ್ಕಾರಿ ಅತಿಥಿ ಗೃಹಕ್ಕೆ ಹೋಗುವ ರಸ್ತೆಯ ಪಕ್ಕದ ಪೋದೆಯಲ್ಲಿ ಎಸೆದಿದ್ದೇನೆ, ಕರೆದುಕೊಂಡು ಹೋದರೆ ತೋರಿಸುತ್ತೇನೆ ಎಂದು ಹೇಳಿರುತ್ತಾನೆ. ಆರೋಪಿಯ ಸ್ವ ಇಚ್ಛಾ ಹೇಳಿಕೆಯನ್ನು ಸಂಬಂಧಪಟ್ಟ ಭಾಗವನ್ನು ನಿಪಿ-21 ಎಂದು ಗುರುತಿಸಲಾಯಿತು. ಅದರ ಮೇಲೆ ಇರುವ ಸಾಕ್ಷಿ ಸಹಿಯನ್ನು ನಿಪಿ-21(ಎ) ಎಂದು ಗುರುತಿಸಲಾಯಿತು. ಆರೋಪಿತನು ತನ್ನ ಹೆಂಡತಿ ತನ್ನ ಸಹೋದರನ ಜೊತೆಗೆ ಅನೈತಿಕ ಸಂಬಂಧ ಹೊಂದಿದ್ದರಿಂದ ಕೊಲೆ ಮಾಡಿದ್ದೇನೆ ಎಂದು ಹೇಳಿರುತ್ತಾನೆ.

ನಂತರ ಆರೋಪಿತನನ್ನು ದಸ್ತಗಿರಿ ಮಾಡಿ ಪಂಚರಾದ ಫ್ರಾಸ್-9 ಮತ್ತು ಫ್ರಾಸ್-10 ರವರನ್ನು ಕರೆದುಕೊಂಡು ಸರ್ಕಾರಿ ಅತಿಥಿ ಗೃಹಕ್ಕೆ ಹೋಗುವ ರಸ್ತೆಯ ಪಕ್ಕಕ್ಕೆ ಇರುವ ಪೋದೆಗೆ ಕರೆದುಕೊಂಡು ಹೋಗಿ ಕೃತ್ಯಕ್ಕೆ ಉಪಯೋಗಿಸಿದ ಚಾಕುವನ್ನು ಆರೋಪಿತನು ಪೋದೆಯಿಂದ ತಂದು ಹಾಜರುಪಡಿಸಿದ್ದನು, ಪಂಚರ ಸಮಕ್ಷಮಾ ಅಮಾನತ್ತುಪಡಿಸಿಕೊಂಡಿರುತ್ತೇನೆ, ಹಾಗೂ ಪೋಟೋಗಳನ್ನು ತೆಗೆದಿರುತ್ತೇನೆ.

ಪಂಚನಾಮೆ ಈಗಾಗಲೇ ನಿಪಿ-9 ಎಂದು ಗುರುತಿಸಲಾಗಿದ್ದು, ಅದರ ಮೇಲಿರುವ ಸಾಕ್ಷಿ ಸಹಿಯನ್ನು ನಿಪಿ-9(ಸಿ) ಎಂದು ಗುರುತಿಸಲಾಯಿತು. ಚಾಕುವನ್ನು ಸಾಕ್ಷಿಯು ಗುರುತಿಸಿದ್ದು, ಅದನ್ನು ಎಂ.ಓ-5 ಎಂದು ಈಗಾಗಲೇ ಗುರುತಿಸಲಾಗಿದೆ, ಪೋಟೋಗಳು ಈಗಾಗಲೇ ನಿಪಿ-10 ಮತ್ತು ನಿಪಿ-11 ಎಂದು ಗುರುತಿಸಲಾಗಿದೆ. ಅಮಾನತ್ತುಪಡಿಸಿದ ಮುದ್ದೆಮಾಲನ್ನು ಪಿ.ಎಫ್ ನಲ್ಲಿ ಅಳವಡಿಸಿ ನ್ಯಾಯಾಲಯಕ್ಕೆ ವರದಿ ಕೊಟ್ಟಿರುತ್ತೇನೆ.

ನ್ಯಾಯಾಲಯದ ಸಮಯ ಮುಗಿದರಿಂದ ಮುಖ್ಯವಿಚಾರಣೆಯನ್ನು ಮಧಾಹ್ನ 2.45 ಕ್ಕೆ ಮುಂದೂಡಲಾಯಿತು.

(ನನ್ನ ಉಕ್ತಲೇಖನಕ್ಕೆ ಮೇರೆಗೆ ಮುಕ್ತ ನ್ಯಾಯಾಲಯದಲ್ಲಿ ಸಾಕ್ಷಿ ಹೇಳಿದ್ದನ್ನು ಯಥಾವತ್ತಾಗಿ ಬೆರಳಚ್ಚು ಮಾಡಲಾಗಿದೆ.)

ಓ ಹೇ ಕೇ ಸ ಇ ಎ ಒ

2 ನೇ ಹೆಚ್ಚುವರಿ ಜಿಲ್ಲಾ ಮತ್ತು ಸತ್ರ
ನ್ಯಾಯಾಧೀಶರು, ಮೈಸೂರು

**ದಿಃ 19.12.2022 ರಂದು ಸಾಕ್ಷಿಯನ್ನು ಪುನಃ ಕರೆಯಿಸಿ ಪ್ರಮಾಣ ವಚನ ಬೋಧಿಸಲಾಯಿತು.**

**ಮುಂದುವರೆದ ಮುಖ್ಯ ವಿಚಾರಣೆ ಮಾನ್ಯ ಸರ್ಕಾರಿ ಅಭಿಯೋಜಕರಿಂದಃ-**

ನಾನು ಜಪ್ತಿ ಪಂಚನಾಮೆಯನ್ನು ಸಾಯಂಕಾಲ 3.00 ಗಂಟೆಯಿಂದ 4.00 ಗಂಟೆ ವರೆಗೆ ಮಾಡಿರುತ್ತೇನೆ. ಆರೋಪಿತನನ್ನು ರಿಮ್ಯಾಂಡ್ ಅರ್ಜಿಯ ಜೊತೆಗೆ ನ್ಯಾಯಾಲಯದ ಮುಂದೆ ಹಾಜರುಪಡಿಸಿರುತ್ತೇನೆ. ದಿಃ 05.08.2019 ರಂದು ಕೃತ್ಯ ನಡೆದ ಸ್ಥಳದ ನಕಾಶೆ ತಯಾರಿಸಿ ಕೊಡುವಂತೆ ಕಾರ್ಯಪಾಲಕ ಅಭಿಯಂತರರಿಗೆ ಮನವಿ

ಪತ್ರವನ್ನು ಕಳುಹಿಸಿರುತ್ತೇನೆ. ದಿಃ 06.08.2019 ರಂದು ಪಿ.ಸಿ 615 ಇವರು ವೈದ್ಯರು ಸಂಗ್ರಹಿಸಿ ಕೊಟ್ಟ ವಿಸ್ರಾ (ದೇಹದ ಭಾಗಗಳನ್ನು) ವನ್ನು ನನ್ನ ಮುಂದೆ ಹಾಜರುಪಡಿಸಿದ್ದು, ಅದನ್ನು ಪಿ.ಎಫ್ ನಲ್ಲಿ ಅಳವಡಿಸಿ ನ್ಯಾಯಾಲಯಕ್ಕೆ ವರದಿ ಕೊಟ್ಟಿರುತ್ತೇನೆ. ನಂತರ ದಿಃ 16.08.2019 ರಂದು ವೈದ್ಯರು ಸಂಗ್ರಹಿಸಿ ಕೊಟ್ಟ ವಿಸ್ರಾ, ಬಟ್ಟೆಗಳು ಮತ್ತು ಚಾಕು, ರಾಸಾಯನಿಕ ಪರೀಕ್ಷೆಗಾಗಿ ಆರ್.ಎಫ್.ಎಸ್.ಎಲ್ ಗೆ ಕಳುಹಿಸಿ ಕೊಟ್ಟಿರುತ್ತೇನೆ.

ನಂತರ ದಿಃ 06.09.2019 ರಂದು ಲೋಕೋಪಯೋಗಿ ಇಲಾಖೆಯಿಂದ ಕೃತ್ಯ ನಡೆದ ಸ್ಥಳದ ನಕಾಶೆಯನ್ನು ಸ್ವೀಕರಿಸಿ ಕಡತದಲ್ಲಿ ಅಳವಡಿಸಿಕೊಂಡಿರುತ್ತೇನೆ. ಹಾಗೂ ಪಿ.ಎಮ್ ವರದಿಯನ್ನು ಪಡೆದುಕೊಂಡಿರುತ್ತೇನೆ. ಪಿ.ಎಮ್ ವರದಿಯನ್ನು ಈಗಾಗಲೇ ನಿಪಿ-17 ಎಂದು ಗುರುತಿಸಲಾಗಿದೆ. ನಂತರ ವೈದ್ಯರಿಗೆ ನಾನು ವಶಪಡಿಸಿಕೊಂಡ ಚಾಕುವನ್ನು ಕಳುಹಿಸಿ ಅಭಿಪ್ರಾಯವನ್ನು ಕೋರಿರುತ್ತೇನೆ. ಸದರಿ ಅಭಿಪ್ರಾಯವನ್ನು ದಿಃ 30.09.2019 ರಂದು ಪಡೆದುಕೊಂಡು ಕಡತದಲ್ಲಿ ಅಳವಡಿಸಿಕೊಂಡಿರುತ್ತೇನೆ. ಅದು ಈಗಾಗಲೇ ನಿಪಿ-19 ಎಂದು ಗುರುತಿಸಲಾಗಿದೆ. ಸಾಕ್ಷಿಯು ಮೃತಳ ಬಟ್ಟೆಗಳನ್ನು ಗುರುತಿಸಿದ್ದು, ಅವು ಈಗಾಗಲೇ ಎಂ.ಓ-2 ರಿಂದ 4 ಎಂದು ಗುರುತಿಸಲಾಗಿದೆ. ನಾನು ಆರ್.ಎಫ್.ಎಸ್.ಎಲ್ ವರದಿಯನ್ನು ಪಡೆದುಕೊಂಡಿರುತ್ತೇನೆ. ದಿಃ 27.09.2019 ರಂದು ಸಾಕ್ಷಿದಾರರಾದ ಚಾಸ್-10 ಮತ್ತು ಚಾಸ್ -11 ರವರ ಹೇಳಿಕೆಯನ್ನು ಕಲಂ 164 ರಲ್ಲಿ ಪಡೆದುಕೊಳ್ಳಲು ನ್ಯಾಯಾಲಯಕ್ಕೆ ಮನವಿ ಪತ್ರ ಸಲ್ಲಿಸಿರುತ್ತೇನೆ. ತನಿಖೆ ಮುಗಿದ ನಂತರ ದೋಷಾರೋಪಣ ಪಟ್ಟಿ ಸಲ್ಲಿಸಿರುತ್ತೇನೆ.

**ಪಾಟೀಸವಾಲು :- ಆರೋಪಿತರ ಪರ ವಕೀಲರಿಂದಃ-**

ಆರೋಪಿತರ ಪರ ವಕೀಲರು ಸಕಾರಣವಿಲ್ಲದೇ ಸಮಯ ಕೇಳಿದ್ದರಿಂದ ಪಾಟೀಸವಾಲು ಇಲ್ಲ ಎಂದು ತೆಗೆದುಕೊಳ್ಳಲಾಯಿತು.

**<u>ಮರುವಿಚಾರಣೆ ಇಲ್ಲ.</u>**

(ನನ್ನ ಉಕ್ತಲೇಖನಕ್ಕೆ ಮೇರೆಗೆ ಮುಕ್ತ ನ್ಯಾಯಾಲಯದಲ್ಲಿ ಸಾಕ್ಷಿ ಹೇಳಿದ್ದನ್ನು ಯಥಾವತ್ತಾಗಿ ಬೆರಳಚ್ಚು ಮಾಡಲಾಗಿದೆ.)

ಓ ಹೇ ಕೇ ಸ ಇ ಎ ಒ

2 ನೇ ಹೆಚ್ಚುವರಿ ಜಿಲ್ಲಾ ಮತ್ತು ಸತ್ರ
ನ್ಯಾಯಾಧೀಶರು, ಮೈಸೂರು